# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿ ಲ್ಲದ ಪ್ರಶ್ನೆ ಸಂಖ್ಯೆ | : | 459 (494) |
| 2. ವಿಧಾನ ಸಭೆ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ |
| 3. ಉತ್ತರಿಸಬೇಕಾದ ದಿನಾಂಕ | : | 19.02.2024 |
| 4. ಉತ್ತರಿಸಬೇಕಾದ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| | | |
|---|---|---|
| ಅ) | ರಾಜ್ಯದಲ್ಲಿನ ಕೇಂದ್ರ ಸರ್ಕಾರದ ರಾಷ್ಟ್ರೀಯ ತೇವ/ ಜೌಗುಪ್ರದೇಶ ಸಂರಕ್ಷಣೆ (Wet Land Conservation) ಕಾರ್ಯಕ್ರಮ ಅನುಷ್ಠಾನ ಯಾವ ಹಂತದಲ್ಲಿದೆ ಮತ್ತು ಈ ಕಾರ್ಯಕ್ರಮದ ರೂಪುರೇಷೆಗಳು ಯಾವುವು: (ಸಂಪೂರ್ಣ ವಿವರ ನೀಡುವುದು) | ಪರಿಸರ ವ್ಯವಸ್ಥೆಯಲ್ಲಿ ಮಹತ್ವದ ಸ್ಥಾನ ಹೊಂದಿರುವ ಜೌಗುಭೂಮಿಗಳ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರವು ಜೌಗುಭೂಮಿ (ಸಂರಕ್ಷಣೆ ಮತ್ತು ನಿರ್ವಹಣೆ) ನಿಯಮಗಳು, 2017ನ್ನು ಜಾರಿಗೊಳಿಸಿ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್. 1203 (ಇ), ದಿನಾಂಕ: 26.09.2017 ರ ಅನುಸಾರ ರಾಜ್ಯ ಸರ್ಕಾರವು ದಿನಾಂಕ: 13.03.2018 ರಂದು ಕರ್ನಾಟಕ ರಾಜ್ಯ ಜೌಗುಭೂಮಿ ಪ್ರಾಧಿಕಾರವನ್ನು ರಚಿಸಿ ಅಧಿಸೂಚಿಸಿರುತ್ತದೆ.<br><br>ರಾಜ್ಯ ಸರ್ಕಾರದ ದಿನಾಂಕ:13.03.2018 ರ ಅಧಿಸೂಚನೆಯನ್ವಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅಧೀನದ ಕರ್ನಾಟಕ ಸರೋವರ ಸಂರಕ್ಷಣಾ ಅಭಿವೃದ್ಧಿ ಪ್ರಾಧಿಕಾರದ (ಕೆ.ಎಲ್.ಸಿ.ಡಿ.ಎ.)ವು ರಾಜ್ಯ ಜೌಗುಭೂಮಿ ಪ್ರಾಧಿಕಾರದ ನೋಡಲ್ ಸಂಸ್ಥೆಯಾಗಿದ್ದು, ಕೆ.ಎಲ್.ಸಿ.ಡಿ.ಎ.ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>ತದನಂತರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 11 ಶಾಸನ 2018, ದಿನಾಂಕ: 26.03.2018 ರಲ್ಲಿ ಕರ್ನಾಟಕ ಸರೋವರ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಅನ್ನು ನಿರಸನಗೊಳಿಸಲಾಗಿದ್ದು, ತನ್ನಿಮಿತ್ತ ಕೆ.ಎಲ್.ಸಿ.ಡಿ.ಎ. ಯು ತನ್ನ ಶಾಸನಬದ್ಧ ಅಸ್ತಿತ್ವವನ್ನು ಕಳೆದುಕೊಂಡಿದ್ದು, ಅದರ ಕಾರ್ಯಗಳನ್ನು ಸಣ್ಣ ನೀರಾವರಿ ಇಲಾಖೆಯ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ)ಕ್ಕೆ ವರ್ಗಾಯಿಸಲಾಗಿರುತ್ತದೆ.<br><br>ಈ ಹಿನ್ನಲೆಯಲ್ಲಿ ದಿನಾಂಕ: 26.03.2018 ರಂದು ಕೆಎಲ್‌ಸಿಡಿಎ ಯು ನಿರಸನಗೊಂಡ ನಂತರ ಸಣ್ಣ ನೀರಾವರಿ ಇಲಾಖೆ (ಕೆಟಿಸಿಡಿಎ/ ಎಮ್.ಐ) ಗೆ ರಾಜ್ಯ ಜೌಗುಭೂಮಿ ಪ್ರಾಧಿಕಾರದ ಕಾರ್ಯನಿರ್ವಹಣೆಯನ್ನು ವಹಿಸಲು ಕಡತವನ್ನು ಕಳುಹಿಸಲಾಗಿರುತ್ತದೆ. ಆದರೆ, ಸಣ್ಣ ನೀರಾವರಿ ಇಲಾಖೆಯು ರಾಜ್ಯ ಜೌಗುಭೂಮಿ ಪ್ರಾಧಿಕಾರದ ನಿರ್ವಹಣೆಯನ್ನು ಅರಣ್ಯ, ಪರಿಸರ ಮತ್ತು |

| | | |
|---|---|---|
| | | ಜೀವಿಪರಿಸ್ಥಿತಿ ಇಲಾಖೆಯಲ್ಲಿ ಮುಂದುವರೆಯುವುದು ಸೂಕ್ತವೆಂದು ಅಭಿಪ್ರಾಯಿಸಿ ಕಡತವನ್ನು ದಿನಾಂಕ: 17.06.2022 ರಂದು ಹಿಂದಿರುಗಿಸಿರುತ್ತದೆ.<br><br>ಈ ಮಧ್ಯೆ, ದಿನಾಂಕ: 31.01.2022 ರಂದು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ರಾಜ್ಯ ಜೌಗುಭೂಮಿ ಪ್ರಾಧಿಕಾರದ ನಿರ್ವಹಣೆಯನ್ನು ವಹಿಸಲು ಆದೇಶಿಸಲಾಗಿರುತ್ತದೆ. ಮುಂದುವರೆದು, ದಿನಾಂಕ: 11.07.2022 ರ ತಿದ್ದುಪಡಿ ಅಧಿಸೂಚನೆಯಂತೆ ರಾಜ್ಯ ಜೌಗುಭೂಮಿ ಪ್ರಾಧಿಕಾರದ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ನೋಡಲ್ ಸಂಸ್ಥೆಯಾಗಿದ್ದು, ಆಯುಕ್ತರು (ತಾಂತ್ರಿಕ ಕೋಶ), ಪರಿಸರ ಇಲಾಖೆ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>ಪ್ರಸ್ತುತ ಚಾಲ್ತಿಯಲ್ಲಿದ್ದ ರಾಜ್ಯ ಜೌಗುಭೂಮಿ ಪ್ರಾಧಿಕಾರದ ತಜ್ಞ ಸದಸ್ಯರ ಮೂರು ವರ್ಷಗಳ ಅವಧಿಯು ಮುಕ್ತಾಯವಾಗಿರುವುದರಿಂದ ನೂತನ ರಾಜ್ಯ ಜೌಗುಭೂಮಿ ಪ್ರಾಧಿಕಾರಕ್ಕೆ ಹೊಸದಾಗಿ ತಜ್ಞ ಸದಸ್ಯರನ್ನು ನಾಮನಿರ್ದೇಶಿಸಬೇಕಾಗಿರುತ್ತದೆ. |
| ಆ) | ರಾಜ್ಯದಲ್ಲಿ ಈ ಯೋಜನೆ ಅಡಿ ಮೈದಾನ. ಪಶ್ಚಿಮಘಟ್ಟ ಮತ್ತು ಕರಾವಳಿ ತೀರದಲ್ಲಿ ನೈಸರ್ಗಿಕವಾಗಿ ರೂಪುಗೊಂಡಿರುವ ತೇವ/ ಜೌಗು ಪ್ರದೇಶಗಳು ಯಾವುವು ಮತ್ತು ಅವುಗಳ ಸಂರಕ್ಷಣೆಗೆ ರೂಪಿಸಿರುವ ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿದೆ: (ಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್.ಆರ್.ಎಸ್.ಎ.ಸಿ) ರವರ ಉಪಗ್ರಹ ಆಧಾರಿತ ಮಾಹಿತಿಯ ಮೇರೆಗೆ, ರಾಜ್ಯದಲ್ಲಿ >2.25 ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಒಟ್ಟು16,787 ಸಂಖ್ಯೆಯ ಜೌಗುಪ್ರದೇಶಗಳಿವೆ ಮತ್ತು <2.25 ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಒಟ್ಟು 21,027 ಸಂಖ್ಯೆಯ ಜೌಗು ಪ್ರದೇಶಗಳಿವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ W.P.(C) 230/2001 ರಲ್ಲಿ ಹೊರಡಿಸಿರುವ ಆದೇಶಾನುಸಾರ ಹಾಗೂ ಕೇಂದ್ರ ಸರ್ಕಾರದ (MoEF&CC), OM ಪತ್ರ ದಿನಾಂಕ: 08.03.2022 ರನ್ವಯ 2.25 ಹೆಕ್ಟೇರ್ ಕ್ಕಿಂತ ಹೆಚ್ಚು ವಿಸ್ತೀರ್ಣ ಹೊಂದಿರುವ ಜೌಗು ಪ್ರದೇಶಗಳನ್ನು ಜೌಗುಭೂಮಿ (ಸಂರಕ್ಷಣೆ ಮತ್ತು ನಿರ್ವಹಣೆ) ನಿಯಮಗಳು, 2017ರ ನಿಯಮ 4 ರನ್ವಯ ಸಂರಕ್ಷಿಸಬೇಕಾಗಿರುತ್ತದೆ. |
| ಇ) | ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಹೆಸರುಘಟ್ಟ ತೇವ ಭೂಮಿ ಸಂರಕ್ಷಣೆ ಯಾವ ಹಂತದಲ್ಲಿದೆ ಮತ್ತು ಈ ತೇವಭೂಮಿ ಅಭಿವೃದ್ಧಿಗೆ ಸಹ ಕ್ರಮಗಳು ಯಾವುವು (ಪೂರ್ಣ ಮಾಹಿತಿ ನೀಡುವುದು) | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರು ವರದಿಸಿರುವಂತೆ 15ನೇ ರಾಜ್ಯ ವನ್ಯಜೀವಿ ಮಂಡಳಿಯ ದಿನಾಂಕ: 19.01.2021 ರ ಸಭೆಯಲ್ಲಿ ಹೆಸರುಘಟ್ಟ ಹುಲ್ಲುಗಾವಲಿನ ಪ್ರದೇಶವನ್ನು "ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ"ವನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿತ್ತು. ಮುಂದುವರೆದು, ರಾಜ್ಯ ವನ್ಯಜೀವಿ ಮಂಡಳಿಯ ತೀರ್ಮಾನದ ಕುರಿತು ರಿಟ್ ಅರ್ಜಿ ಸಂಖ್ಯೆ: 6374/2021 ಮತ್ತು 11738/2021 ರ ಪ್ರಕರಣಗಳಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 29.07.2022 ರಂದು "ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು |

| | | |
|---|---|---|
| | | ಪ್ರದೇಶ"ವನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆ ಕುರಿತು ಹೊಸದಾಗಿ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಿರುತ್ತದೆ.<br><br>ಆದುದರಿಂದ ಹೆಸರುಘಟ್ಟ ಸುತ್ತಮುತ್ತಲಿನ ಪ್ರದೇಶಗಳನ್ನು ಸಂರಕ್ಷಣಾ ಮೀಸಲು ಪ್ರದೇಶವೆಂದು ಘೋಷಣೆ ಮಾಡುವ ಪ್ರಸ್ತಾವನೆಯನ್ನು ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಈ) | ರಾಜ್ಯದಲ್ಲಿ ನೈಸರ್ಗಿಕ ರೂಪಗೊಂಡಿರುವ ಈ ಜೌಗುಪ್ರದೇಶಗಳನ್ನು ಸಂರಕ್ಷಿಸಲು 'ರಾಮಸರ್' ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದೆಯೇ? | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರು ವರದಿಸಿರುವಂತೆ ರಾಜ್ಯ ಸರ್ಕಾರದ ಶಿಫಾರಸ್ಸು ಮೇರೆಗೆ Convention on Wetlands ರವರು ರಾಜ್ಯದ ಪಕ್ಷಿಕಾಶಿ ಎಂದೇ ವಿಶ್ವ ಪ್ರಸಿದ್ಧಿ ಪಡೆದಿರುವ ರಂಗನತಿಟ್ಟು ಪಕ್ಷಿಧಾಮವನ್ನು 2022 ರಲ್ಲಿ ರಾಮ್‌ಸರ್ ತಾಣಗಳಿಗೆ ಪಟ್ಟಿಗೆ ಸೇರ್ಪಡೆ ಮಾಡಲಾಗಿರುತ್ತದೆ. ಮುಂದುವರೆದು 2024ನೇ ಸಾಲಿನಲ್ಲಿ ರಾಜ್ಯದ ವಿಜಯನಗರ ಜಿಲ್ಲೆಯ ಅಂಕಸಮುದ್ರ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ, ಗದಗ ಜಿಲ್ಲೆಯ ಮಾಗಡಿ ಕೆರೆ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ ಹಾಗೂ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ಎಸ್ಚುರಿ (Estuary) ಪ್ರದೇಶಗಳನ್ನು ರಾಮ್‌ಸರ್ ತಾಣಗಳ ಪಟ್ಟಿಗೆ ಸೇರ್ಪಡೆ ಮಾಡಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ 4 ರಾಮ್‌ಸರ್ ತಾಣಗಳಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿವೆ.<br><br>ಮುಂದುವರೆದು ಈವರೆವಿಗೂ ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಉ) | ಹಾಗಿದ್ದಲ್ಲಿ, ಪ್ರಸ್ತುತದಲ್ಲಿ ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ ಮತ್ತು ಈ ಯೋಜನೆ ಅಡಿ ರಾಜ್ಯ ಸರ್ಕಾರ ಕೇಂದ್ರದಿಂದ ಪಡೆದಿರುವ ಆರ್ಥಿಕ ನೆರವು ಮತ್ತು ಇತರೆ ಸೌಲಭ್ಯಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | |

**ಸಂಖ್ಯೆ.**ಅಪಜೀ 32 ಇಎನ್‌ವಿ 2024

Belarell

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು